ಎಸ್.ಎ. ಮೋಹನರಾಜು, ಶಂಕರಘಟ್ಟ
ಹಿತ್ತಾಳೆ ಕಿವಿಯವರು ಅಪಾಯಕಾರಿ. ಬಂಗಾರದ ಕಿವಿಯವರು?



ಕಿವಿ ‘ಕೊರೆಯುವವರಿಂದ’ ದೂರವೇ ಉಳಿಯುವ ಉಪಾಯಕಾರಿಗಳು.

ನಾಗೇಶ್ ಮೈಸೂರು, ಸಿಂಗಪುರ
ಯಂತ್ರಕ್ಕೂ ತಾಯತಕ್ಕೂ ಇರುವ ವ್ಯತ್ಯಾಸವೇನು?
ತಾಯತ ಮೌಢ್ಯಕ್ಕೆ ಸಂದ ಪದಕ; ಯಂತ್ರ ಷಡ್ಯಂತ್ರ.

ಶ್ರೀನಿವಾಸ ಜಿ. ಪದಕಿ, ಮುಂಬಯಿ
ಹೆಣ್ಣು ಹೊನ್ನು ಮಣ್ಣಿನಿಂದ ದೂರವಿರಬೇಕೆಂಬ ಜ್ಞಾನಿಗಳು ಹುಟ್ಟುವಾಗ ಹೆಣ್ಣಾದ ತಾಯಿಯಿಂದ ಎಷ್ಟು ದೂರವಿದ್ದರು?
ಹುಟ್ಟುವಾಗ ಜ್ಞಾನಿಯಾಗಿರಲಿಲ್ಲವಲ್ಲ; ಜ್ಞಾನಿ ಎನಿಸಿಕೊಂಡಾಕ್ಷಣ ಅಮ್ಮನಿಗೆ ವಾನಪ್ರಸ್ಥ ತೋರಿದರಂತೆ.

ರಾಮಚಂದ್ರ, ಕೊಪ್ಪಲು
ಪೊಲೀಸ್ ಠಾಣೆಯಲ್ಲಿ ಕಳ್ಳರ ಕೈಗೆ ತಂತ್ರಜ್ಞಾನದ ಕಾಲದಲ್ಲೂ ಸ್ಲೇಟನ್ನೇ ಕೊಡುವುದೇಕೆ?



ಸ್ಲೇಟನ್ನು ನೋಡಿದಾಗಲಾದರೂ ತಿದ್ದಿಕೊಳ್ಳುವುದು ನೆನಪಿಗೆ ಬರಲೆಂದು.

ಸೀಮಂತಿನಿ ದೇಸಾಯಿ, ಬೆಂಗಳೂರು
ನನ್ನಲ್ಲಿಯ ನಾನು; ನಿನ್ನಲ್ಲಿಯ ನಾನು; ನಿನ್ನಲ್ಲಿಯ ನೀನು ನೀನಲ್ಲ...?
ನನ್ನಲ್ಲೆ ನೀನಿರುವೆಯಲ್ಲ. ಆದರೂ ನೀನಿರುವೆ ಅಲ್ಲ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಸತ್ಯ ಕಹಿಯಾಗಿರುತ್ತದಂತೆ. ಸುಳ್ಳು?
ಗರಂ ಮಸಾಲ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಮೋಕ್ಷಕ್ಕೂ, ಜ್ಞಾನೋದಯಕ್ಕೂ ಅಂತರ ಇದೆಯೇ ಗುರುಗಳೇ?
ಇದೆ. ಮೊದಲು (ಕಪಾಳ)ಮೋಕ್ಷ, ನಂತರ ಜ್ಞಾನೋದಯ ಎನ್ನುವುದು ಹರೆಯನಿಯಮ.

ಅಮರಯ್ಯಾ ಪತ್ರಿಮಠ, ಸುರಪುರ
ನಿರೀಕ್ಷೆಯಲ್ಲೇ ಸಮಯ ಕಳೆಯುವವರಿಗೆ ನಿಮ್ಮ ಹಿತನುಡಿ?
ಚಲ್‌ನಾ ಜೀವನ್ ಕೀ ಕಹಾನಿ; ರುಕ್‌ನಾ ಮೌತ್ ಕೀ ನಿಶಾನಿ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಆಪಾದನೆಗಳು ಯಾರನ್ನೂ ಬಿಟ್ಟಿಲ್ಲವಲ್ಲಾ...?
ಗುಡ್. ಆಪಾದನೆ ಪಾಲಿಷ್‌ನಂತೆ. ಅಂಟಿಕೊಂಡದ್ದನ್ನು ಉಜ್ಜಿಹಾಕಿದರೆ ಮೂಲವಸ್ತು ಥಳಥಳ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
ರಾಮನ ಹೆಸರಿನವರೆಲ್ಲರೂ ಏಕಪತ್ನೀವ್ರತಸ್ಥರೆ ಎಂಬ ನನ್ನ ನಂಬಿಕೆ ಸತ್ಯ ತಾನೆ ರಾಮ್?
ಅಸಾರಾಮನ ಅಂತಃಪುರ ಅಲ್ಲ ಎನ್ನುತ್ತಿದೆ.

ಗಂಜಾಂ ನಾಗರಾಜ, ಮೈಸೂರು
ಅನಾಥಾಲಯದಲ್ಲಿ ಅನಾಥರೇ ಇರಬೇಕಾ?
ಹಾಗೇನಿಲ್ಲ. ಅಡಿಗೆಯವರ ಕೆಲಸ ಖಾಲಿ ಇದೆಯಂತೆ...

ಹರಿತಸ, ಬೆಂಗಳೂರು
ಮ್ಯಾನ್ ಅವರ್ಸ್, ಮ್ಯಾನ್ ಪವರ್ ಇರುವಂತೆ ವುಮನ್ ಪವರ್, ವುಮೆನ್ಸ್ ಅವರ್ಸ್ ಯಾವಾಗ ಬರುತ್ತದೆ?
ಪವರ್ ಗರ್ಲ್ ಇದ್ದಾಳೆ. ಮ್ಯಾನ್ ಅವರ್‌ಗಿಂತ 24 ಪಟ್ಟಿನ ಡೇ ಇದೆ ವುಮನ್ಸ್ ಡೇ.

ಬೂಕನಕೆರೆ ವಿಜೇಂದ್ರ, ಮೈಸೂರು
ರಾಜಕಾರಣಿಗಳಿಗೇಕೆ ಹೊಟ್ಟೆ ದಪ್ಪ ಇರುತ್ತದೆ?
ತಮ್ಮದೇ ತಪ್ಪುಗಳನ್ನು ಆಗಾಗ್ಗೆ ಹೊಟ್ಟೆಗೆ ಹಾಕಿಕೊಳ್ಳುವುದರಿಂದ.

ಶೃತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ದೇವಸ್ಥಾನಕ್ಕೆ ಹೋಗೋಣ ಬಾ ಎಂದು ಕರೆದರೆ ಇಂದಿನ ಯುವಕರೇಕೆ ನಿರಾಕರಿಸುತ್ತಾರೆ?
ಅವರ ‘ತೀರ್ಥ’ ಕ್ಷೇತ್ರಗಳೇ ಬೇರೆ ಇರುತ್ತವೆ.

## ಬಹುಮಾನಿತ ಪ್ರಶ್ನೆ

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಸರ್ಕಾರ ‘ಸ್ವಸಹಾಯ ಪದ್ಧತಿ’ ಆಸ್ಪತ್ರೆ ಪ್ರಾರಂಭಿಸಿದರೆ?
ಯಮ ಯಮಲೋಕದ ಬ್ರ್ಯಾಂಚನ್ನು ಇಲ್ಲೇ ಓಪನ್ ಮಾಡುತ್ತಾನೆ.

ಸ್ವಾತಿ ಎಂ.ಎಸ್. ಗೌರಿಬಿದನೂರು
ಜೀವಾತ್ಮಕ್ಕೂ ಪ್ರೇತಾತ್ಮಕ್ಕೂ ಇರುವ ವ್ಯತ್ಯಾಸವೇನು?
ಒಂದೇ ಕ್ಷಣ; ಢಂ ಎನ್ನುವುದಕ್ಕೆ ಮುಂಚೆ ಜೀವಾತ್ಮ; ನಂತರ ಪ್ರೇತಾತ್ಮ.

ವಿ. ಹಮೀದ್, ವಿಟ್ಲ
ಮಳೆಯಲ್ಲಿ ತೊಯ್ದ ಹುಡುಗಿ ನಿಮ್ಮ ಮುಂದೆ ಬಂದರೆ ಏನು ಮಾಡುವಿರಿ ಸಾರ್?
ಟವೆಲ್ ಕೊಡುತ್ತೇನೆ. ನೀವು?

ಎಂ.ಎ. ಕುಮಾರ್, ಬೆಂಗಳೂರು
ಚೆಂದುಳ್ಳಿ ಚೆಲುವೆಗೆ ಒಡವೆಯಾದರೂ ಏಕೆ ಬೇಕು?



ಮುತ್ತು ರತ್ನ ಹವಳ ಜೊತೆಗಿದ್ದರೆ ಚೊಕ್ಕ ಬಂಗಾರದ ಮೆರಗೇ ಮೆರಗು.

ಬಿ.ಆರ್. ಉಷಾ, ಬೆಂಗಳೂರು
ಶ್ರೀರಾಮನಿಗೆ ಬಾಲ ಇರುವ ಗೆಳೆಯನಿದ್ದಾನೆ. ನಿಮಗೆ?
ಬಾಲಸೂರ್ಯನ ಬೆಳಕಿನವಳೇ ಹಿತೈಷಿಯಾಗಿದ್ದಾಳೆ.

ಸದಾನಂದ ಹೆಗಡೆಕಟ್ಟೆ, ಮೂಡಬಿದಿರೆ
ಕೈಲಿ ಕೇಸೇ ಇಲ್ಲ; ನ್ಯಾಯವಾದಿಯೆಂಬ ಗರ್ವ; ಇಂಥವನನ್ನು 'ಸಂಡೇ ಪ್ಲೀಡರ್' ಎಂದು ಕರೆದರೆ ತಪ್ಪೆ?
ನಿಮಗೆ ನೆಗಡಿಯಿದ್ದಾಗ ಕರೆಯಬೇಡಿ; ‘ಬ್ಲೀಡರ್ ಎಂದ’ ಎಂದು ನಿಮ್ಮ ಮೇಲೇ ಕೇಸ್ ಹಾಕಿಯಾನು.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in